# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**MVC 306/2023**

**RW2**

| | | |
|---|---|---|
| ಸಾಕ್ಷಿಯ ಹೆಸರು | : | ಹೇಮಂತ್ ಕುಮಾರ್ |
| ತಂದೆ ಹೆಸರು | : | ಸತೀಶ್ ಚಂದ್ರ ಸಿಂಗ್ |
| ಪ್ರಾಯ | : | 44 ವರ್ಷ |
| ಉದ್ಯೋಗ | : | ಡೆಪ್ಯುಟಿ ಮ್ಯಾನೇಜರ್, ಓರಿಯೆಂಟಲ್ ಇನ್ಸೂರೆನ್ಸ್ ಕಂಪನಿ |
| ವಾಸ | : | ಉಡುಪಿ |

ದಿನಾಂಕ : 05**.12.2025** ರಂದು ಆರ್ಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀಮತಿ ಬಿ.ಎನ್. ಎದುರುದಾರರ ಪರ ವಕೀಲರಿಂದಃ

1. ನಾನು ಈ ಕೇಸಿನ ಎದುರುದಾರ. ನನ್ನ ಮುಖ್ಯ ವಿಚಾರಣೆಯ ಬದಲಿಗೆ ನಾನು ಈ ದಿನ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು , ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ಸತ್ಯವಾಗಿವೆ.

2. ಇಕೋ ವಾಹನವನ್ನು ಚಲಾಯಿಸುತ್ತಿದ್ದ ರಾಜೇಶ್ ಶೆಣೈ / ಅರ್ಜಿದಾರರ ಡಿಎಲ್ ನ ಪ್ರತಿಯನ್ನು ನಿಆರ್ - 2 ಎಂದು, ಈ ಪ್ರಕರಣಕ್ಕೆ ಸಂಬಂಧಿಸಿದ ಅಂತಿಮ ವರದಿಯ ದೃಢೀಕೃತ ನಕಲನ್ನು ನಿಆರ್ - 3 ಎಂದು, ಸಿಸಿ 99/2023 ರ ಆರ್ಡರ್ ಶೀಟ್ ನ ದೃಢೀಕೃತ ನಕಲನ್ನು ನಿಆರ್ - 4 ಎಂದು, ಪೋಲೀಸ್ ಇಂಟಿಮೇಷನ್ ನ ದೃಢೀಕೃತ ನಕಲನ್ನು ನಿಆರ್ - 5 ಎಂದು, ಪೋಲೀಸರು ಪಂಚಾಯತ್ ನವರಿಗೆ ನೀಡಿದ ನೋಟೀಸಿನ ದೃಢೀಕೃತ ನಕಲನ್ನು ನಿಆರ್ - 6 ಎಂದು, ಪಂಚಾಯತ್ ನವರು ನೀಡಿದ ಪ್ರತ್ಯುತ್ತರದ ದೃಢೀಕೃತ ನಕಲನ್ನು ನಿಆರ್ - 7 ಎಂದು, 1 ನೇ ಎದುರುದಾರರಿಗೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ನಿಆರ್ - 8 ಎಂದು, ನನಗೆ ನೀಡಿದ ಅಧಿಕಾರ ಪತ್ರವನ್ನು ನಿಪಿ - 9 ಎಂದು, ಅರ್ಜಿದಾರರು ಚಲಾಯಿಸುತ್ತಿದ್ದ ಇಕೋ ವಾಹನಕ್ಕೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ಅರ್ಜಿದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ - 10 ಎಂದು ಗುರುತಿಸಲಾಯಿತು. ಆದ್ದರಿಂದ ಪ್ರಮಾಣಪತ್ರದಲ್ಲಿ ಕೇಳಿರುವಂತೆ ಆದೇಶ ಮಾಡಬೇಕಾಗಿ ಪ್ರಾರ್ಥನೆ.

<u>ಪಾಟೀ ಸವಾಲುಃ</u> ಶ್ರೀ ಎನ್.ವಿ.ಪಿ. ಅರ್ಜಿದಾರರ ಪರ ವಕೀಲರಿಂದಃ

ನಾನು ನ್ಯಾಷನಲ್ ವಿಮಾ ಕಂಪನಿಯ ಅಧಿಕಾರಿಯಾಗಿರುವುದಿಲ್ಲ. ನಾನು ಓರಿಯೆಂಟಲ್ ಇನ್ಸೂರೆನ್ಸ್ ಕಂಪನಿ ಅಂದರೆ 2 ನೇ ಎದುರುದಾರರ

ವತಿಯಿಂದ ಬಂದಿರುತ್ತೇನೆ. ನಾನು ನ್ಯಾಷನಲ್ ಇನ್ಸೂರೆನ್ಸ್ ಕಂಪನಿಯಿಂದ ಸಾಕ್ಷಿ ಹೇಳಲು ನನಗೆ ಯಾವುದೆ ಅಧಿಕಾರ ಇರುವುದಿಲ್ಲ. ಈ ದಿನ ನಾನು ಹಾಜರುಪಡಿಸಿರುವ ದಾಖಲೆಗಳು ಮಾರುತಿ ಇಕೋ ಕಾರು ಸಂಖ್ಯೆ ಕೆಎ - 16 ಎಮ್ - 8601 ಕ್ಕೆ ಸಂಬಂಧಿಸಿದ ದಾಖಲೆಗಳಾಗಿರುತ್ತದೆ. ಅದಕ್ಕೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ನ್ಯಾಷನಲ್ ಇನ್ಸೂರೆನ್ಸ್ ಕಂಪನಿಯವರು ನೀಡಿರುತ್ತಾರೆ ಎಂದರೆ ಸರಿ. ನಮ್ಮ ಕಂಪನಿಯ ತನಿಖಾಧಿಕಾರಿಗಳು ದಾಖಲೆಗಳನ್ನು ಪಡೆದಿರುತ್ತಾರೆ. ನಿಆರ್ - 10 ದಾಖಲೆಯು ಸಂಪೂರ್ಣ ಪುಟಗಳನ್ನು ಹೊಂದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಎಷ್ಟು ಪುಟಗಳಿದೆ ಎಂದು ನನಗೆ ತಿಳಿದಿಲ್ಲ. ನಮ್ಮ ಕಂಪನಿ ಮತ್ತು ನ್ಯಾಷನಲ್ ಇನ್ಸೂರೆನ್ಸ್ ಕಂಪನಿಯ ನಡುವೆ ವೆಬ್ ಸೈಟ್‌ಗಳ ಮೂಲಕ ಸಂಪರ್ಕ ವ್ಯವಸ್ಥೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಬಳಿ ನಿಆರ್ - 10 ರ ಪ್ರತಿ ಇದ್ದ ಕಾರಣ, ನಾವು ನ್ಯಾಷನಲ್ ಇನ್ಸೂರೆನ್ಸ್ ಕಂಪನಿಯವರ ಮೂಲಕ ವಿಮಾ ಪಾಲಿಸಿಯನ್ನು ಪಡೆಯಲು ಪ್ರಯತ್ನಿಸಿರುವುದಿಲ್ಲ. ನಿಆರ್ - 10 ರಲ್ಲಿ ಸದರಿ ವಾಹನ ಅಂಬ್ಯುಲೆನ್ಸ್ ಎಂದು ನಮೂದಾಗಿದೆ ಎಂದರೆ ಸರಿ. ಆರ್.ಸಿ ಪ್ರಕಾರವಾಗಿ ಸದರಿ ವಾಹನವನ್ನು ಅಂಬ್ಯುಲೆನ್ಸ್ ಆಗಿ ಉಪಯೋಗಿಸಲು ಅನುಮತಿ ಇರಲಿಲ್ಲ. ನಾನು ಸದರಿ ವಾಹನದ ಆರ್.ಸಿ. ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ನ್ಯಾಷನಲ್ ಇನ್ಸೂರೆನ್ಸ್ ಕಂಪನಿಯವರು ನೀಡಿರುವ ವಿಮಾ ಪಾಲಿಸಿಯು ಸರಿ ಇರುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಆರದೆ

ಚಾರ್ಜ್ ಶೀಟನ್ನು ಓದಿಸಿ, ತಿಳಿದುಕೊಂಡಿದ್ದೇನೆ. ಸದರಿ ಚಾರ್ಜ್ ಶೀಟ್ ಪ್ರಕಾರ ಅರ್ಜಿದಾರರಿಗೆ ಡಿಎಲ್ ಇದ್ದು, ಅಪಘಾತದ ಸಮಯದಲ್ಲಿ ಡಿಎಲ್ ನ್ನು ರಿನ್ಯೂ ಮಾಡಿರಲಿಲ್ಲ ಎಂದರೆ ಸರಿಯಲ್ಲ.

ನಾವು ಈ ಪ್ರಕರಣದಲ್ಲಿ 1 ನೇ ಎದುರುದಾರರ ಬಸ್ಸಿಗೆ ಮಾತ್ರ ವಿಮಾ ಪಾಲಿಸಿಯನ್ನು ನೀಡಿರುತ್ತೇವೆ. ನನಗೆ ನ್ಯಾಷನಲ್ ಇನ್ಸೂರೆನ್ಸ್ ಕಂಪನಿಯ ವಿಮೆಯ ಬಗ್ಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ನಾವು ನೀಡಿರುವ ವಿಮಾ ಪಾಲಿಸಿಯ ಶರತ್ತು ಮತ್ತು ನಿಯಮಗಳಿಗೆ ಬದ್ದವಿದ್ದೇವೆ ಎಂದರೆ ಸರಿ. ಈ ಪ್ರಕರಣದಲ್ಲಿ 1 ನೇ ಎದುರುದಾರರು ಯಾವುದೇ ಶರತ್ತು ಮತ್ತು ನಿಯಮಗಳನ್ನು ಉಲ್ಲಂಘಿಸಿರುವುದಿಲ್ಲ. ನಾವು ನೀಡಿರುವ ವಿಮಾ ಪಾಲಿಸಿಯು ಪ್ಯಾಕೇಜ್ ಪಾಲಿಸಿಯಾಗಿದ್ದು, ಥರ್ಡ್ ಪಾರ್ಟಿಗಳಿಗೆ ಕವರೇಜ್ ಇರುತ್ತದೆ ಎಂದರೆ ಸರಿ. ಆದರೆ ನಮ್ಮ 1 ನೇ ಎದುರುದಾರರ ವಾಹನದ ವಿರುದ್ಧ ಯಾವುದೇ ಅಂತಿಮ ವರದಿ ಸಲ್ಲಿಸಲಾಗಿಲ್ಲ. ಅಂತಿಮ ವರದಿ ನಿಆರ್ - 3 ರ ಪ್ರಕಾರ ಎರಡು ವಾಹನಗಳು ಅಪಘಾತದಲ್ಲಿ ಒಳಗೊಂಡಿರುತ್ತದೆ ಎಂದರೆ ಸರಿ. 1 ನೇ ಎದುರುದಾರರ ವಾಹನಕ್ಕೆ ಎಲ್ಲಾ ದಾಖಲೆಗಳು ಸರಿಯಾಗಿದ್ದು, ನಮ್ಮ ಬಳಿ ಇರುತ್ತದೆ. ನಿಆರ್ - 8 ನ್ನು ಬಿಟ್ಟು ಬೇರೆ ಯಾವುದೇ ದಾಖಲೆಗಳ ಬಗ್ಗೆ ಹೇಳಿಕೆ ನೀಡಲು ನನಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಅರ್ಜಿಯ ಐಎಂ.ವಿ ಕಾಯ್ದೆಯ ಕಲಂ 164 ರಲ್ಲಿ ಸಲ್ಲಿಸಿರುವ ಕಾರಣ ನಾವು

ಅರ್ಜಿದಾರರಿಗೆ ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,

ಕಾರ್ಕಳ.